ಓ.ಎಸ್.199/2021 ಪಿ.ಡಬ್ಲು-1
*ಚಂದ್ರಶೇಖರ್ ತಂದೆ ರಾಜಪ್ಪ ಕಿಲ್ಲಾದಾರ*

ದಿ.11-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ಶ್ರೀ ಎನ್.ಎಸ್.ಎಸ್. ವಕೀಲರಿಂದ:-**

ದಾವಾ ಆಸ್ತಿ ನಂ.4-4-218/ಎ1 ಟಿಪ್ಪು ಸುಲ್ತಾನನ ಆಸ್ತಿ ಎಂದರೆ ಸರಿಯಲ್ಲ. ಅದು ನನ್ನ ಆಸ್ತಿ. ಆಸ್ತಿ ನಂ.4-4-218/ಎ ಮಾತ್ರ ಟಿಪ್ಪು ಸುಲ್ತಾನನ ಆಸ್ತಿಯಾಗಿರುತ್ತದೆ. ನಿ.ಪಿ-1 ಖರೀದಿ ಪತ್ರದಲ್ಲಿ ಆಸ್ತಿ ನಂ. ನಂ.4-4-218/ಎ1 ಎಂದು ಇಲ್ಲ ಎಂದರೆ ಸರಿ. ಸಾಕ್ಷಿ ಮುಂದವರೆದು ಪುರಸಭೆಯವರು ಖರೀದಿ ಮಾಡಿದ ನಂತರ ನಂ.4-4-218/ಎ1 ಎಂದು ನನ್ನ ವಿಸ್ತೀರ್ಣಕ್ಕೆ ಸೇರಿಸಿರುತ್ತಾರೆ. ನನ್ನ ವಾದ ಪತ್ರದಲ್ಲಿ ಪುರಸಭೆಯವರು ಖರೀದಿ ಮಾಡಿದ ನಂತರ ನಂ.4-4-218/ಎ1 ಎಂದು ಸೇರಿಸಿರುತ್ತಾರೆ ಎಂದು ಬರೆಸಿರುವುದಿಲ್ಲ. ನಾನು ಪುರಸಭೆಯಲ್ಲಿ ನಂ.4-4-218/ಎ1 ಎಂದು ನಾನು ಸೇರಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದವರೆದು ನಿ.ಪಿ-2 ಮುಟೇಷನ್ ಆದ ನಂತರ ಪುರಸಭೆಯವರು ನೀಡಿದ ದಾಖಲೆ ಆಗಿರುತ್ತದೆ. ನಿ.ಪಿ-1 ರ ಪ್ರಕಾರ ಟಿಪ್ಪುಸುಲ್ತಾನ ನಂ.4-4-218/ಎ1 ಕ್ಕೆ ಮೊದಲು ಮಾಲಿಕರು ಇದ್ದರು ಎಂದರೆ ಸರಿ. ನಾನು ಖರೀದಿ ಮಾಡಿದ ನಂತರ 12 * 22 ವಿಸ್ತೀರ್ಣಕ್ಕೆ ನಾನು ಮಾಲೀಕನಾಗಿರುತ್ತೇನೆ. ನಿ.ಪಿ-1 ಖರೀದಿ ಪತ್ರವನನ್ನು ನಾನು ಟಿಪ್ಪುಸುಲ್ತಾನನ ಪರವಾಗಿ ಕೇಸು ನಡೆಸುವ ಸಲುವಾಗಿ ಆಧಾರಕ್ಕಾಗಿ ಬರೆಸಿಕೊಂಡ ದಾಖಲೆ ಎಂದರೆ ಸರಿಯಲ್ಲ.

2. 2012 ರಲ್ಲಿ ನಿ.ಪಿ-1 ನ್ನು ಬರೆಯಿಸಿಕೊಂಡಿರುತ್ತೇನೆ ಎಂದರೆ ಸರಿ. 2012 ರಲ್ಲಿ ಖರಿದಿ ಪತ್ರ ಆದರೂ ಸಹ ನಾನು 2021-2022 ನೇ ಸಾಲಿನಲ್ಲಿ ಮುಟೇಷನ್ ಮಾಡಿಸಿರುತ್ತೇನೆ ಎಂದರೆ ಸರಿ. ಕಾರಣ ಟಿಪ್ಪುಸುಲ್ತಾನರವರು ತಕರಾರು ಕೊಟ್ಟಿದ್ದರಿಂದ ಮುಟೇಷನ್ ತಡವಾಗಿರುತ್ತದೆ. ಟಿಪ್ಪುಸುಲ್ತಾನರು ಪುರಸಭೆಗೆ ಕೊಟ್ಟಿದ್ದ ತಕರಾರಿನ ಪ್ರತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ನಾನು 2012 ರಿಂದ 2021 ವರೆಗೆ ಪುರಸಭೆಯವರಿಗೆ ಯಾವುದೇ ತೆರಿಗೆ ಪಾವತಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮೂಲ ತೆರಿಗೆ ರಸೀದಿಗಳನ್ನು ಓ.ಎಸ್.ನಂ.118/2018 ರಲ್ಲಿ ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಸಲ್ಲಿಸಿದ್ದನ್ನು ದೃಡಿಕೃತ ನಕಲನ್ನು ಹಾಜರು ಪಡಿಸಿರುತ್ತೇನೆ. 2012 ರಿಂದ 2021 ವರೆಗೆ ಆಸ್ತಿ ತೆರಿಗೆ ಭರಣ ಮಾಡದೆ ಇದ್ದರೂ ಸಹ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಈ ದಾವೆಯನ್ನು ನಾನು ಕೇವಲ ಶಾಶ್ವತ ಪ್ರತಿಬಂದಕಾಜ್ಞೆಕ್ಕಾಗಿ ಮಾತ್ರ ಸಲ್ಲಿಸಿರುತ್ತೇನೆ. ಸಾಕ್ಷಿಗೆ ಒಂದು ಫೋಟೋ ತೋರಿಸಲಾಗಿ ಅವು ಟಿಪ್ಪುಸುಲ್ತಾನನ ಆಸ್ತಿ ಎಂದು ಸೂಚಿಸಿದರೆ ಅಲ್ಲ ಎಂದು ನುಡಿಯುತ್ತಾರೆ. ಆದರಲ್ಲಿ ಕಾಣುವ ಕಾಂಪ್ಲೆಕ್ಸ್ ಬಿಟ್ಟು ಉತ್ತರ ದಿಕ್ಕಿನ ಕಡೆ

ಟಿಪ್ಪುಸುಲ್ತಾನನ ಆಸ್ತಿ ಇವೆ ಎಂದರೆ ಸರಿಯಲ್ಲ. ಅವು ಶಶಿಕಾಂತ ಆದಿ ರವರ ಆಸ್ತಿಯಾಗಿರುತ್ತವೆ. ನಾನು ದಾವಾ ಆಸ್ತಿಯ ಫೋಟೋಗಳನ್ನು ಹಾಜರು ಪಡಿಸಿರುವುದಿಲ್ಲ. ದಾವಾ ಆಸ್ತಿಯ ಕಬ್ಜಾಕ್ಕೆ ಸಂಬಂಧಿಸಿದಂತೆ ನಿ.ಪಿ-1 ರಿಂದ 5 ಗಳನ್ನು ಸಲ್ಲಿಸಿರುತ್ತೇನೆ. ನಿ.ಪಿ-2 ರಿಂದ 5 ದಾಖಲೆಗಳನ್ನು ನಾವು ಖೊಟ್ಟಿಯಾಗಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಅಭಿಪ್ರಾಯ ಪತ್ರವನ್ನು ತೋರಿಸಲಾಗಿ ಅದು ತಾನೆ ನೀಡಿದ್ದು ಎಂದು ಒಪ್ಪಿದ್ದರಿಂದ ಅದನ್ನು ನಿ.ಡಿ-1 ಎಂದು ಗುರುತಿಸಲಾಯಿತು. ಸಾಕ್ಷಿಗೆ ವರ್ಗಾವಣೆ ಮುಬಾದಿಲು ಅರ್ಜಿಯಲ್ಲಿ ಸಹಿ ಮತ್ತು ಹಸ್ತಾಕ್ಷರ ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಡಿ-2 ಎಂದು ಗುರುತಿಸಲಾಯಿತು. ಸದರಿ ನಿ.ಡಿ-2 ನಮ್ಮ ವಕೀಲರ ಕಾರ್ಯಾಲಯದಲ್ಲಿದ್ದ ದಾಖಲೆಯಾಗಿರುತ್ತದೆ. ಸಾಕ್ಷಿಗೆ ವರ್ಗಾವಣೆ ಮುಬಾದಲ್ ಅರ್ಜಿಯಲ್ಲಿ ಸಹಿ ಮತ್ತು ಹಸ್ತಾಕ್ಷರ ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಡಿ-3 ಎಂದು ಗುರುತಿಸಲಾಯಿತು. ಸದರಿ ನಿ.ಡಿ-3 ನ್ನು ನಾನು ಪುರಸಭೆಯವರಿಗೆ ಸಲ್ಲಿಸಿದ ದಾಖಲೆಯಾಗಿರುತ್ತದೆ.

4. ಆಸ್ತಿ ನಂ.4-4-218/ಎ ಇದು ಟಿಪ್ಪುಸುಲ್ತಾನನಿಗೆ ಸಂಬಮಧಿಸಿದ ಸೂಚಿಸಿದ ಪತ್ರವನ್ನು ಪಟ್ಟಣ ಪಂಚಾಯತಿ ಮುದಗಲ್ ರವರು ನೀಡಿರುವ ದಾಖಲೆ ಎಂದರೆ ಸರಿ. ಸದರಿ ದಾಖಲೆಗಳು ನಾನು ಮುಟೆಷನ್ನಿಗೆ ಕೊಟ್ಟಾಗ ಪುರಸಭೆಯವರು ಮೂಲ ದಾಖಲೆಯೊಂದಿಗೆ ವಿಚಾರಣೆಗೆ ಬನ್ನಿ ಎಂದು ನೀಡಿದ ಸೂಷನಾ ಪತ್ರವಾಗಿರುತ್ತದೆ ಅವು ನನ್ನ ಕಾರ್ಯಾಲಯದಲ್ಲಿದ್ದವು. ಸದರಿ ದಾಖಲೆಗಳನ್ನು ನಿ.ಡಿ-4 ಮತ್ತು 5 ಎಂದು ಗುರುತಿಸಲಾಯಿತು. ನಿ.ಪಿ-1 ಖರೀದಿ ಪತ್ರದ ಮೂಲ ದಾಖಲೆಯನ್ನು ನಾನು ಸೂಚನಾ ಪತ್ರದ ಪ್ರಕಾರ ಪುರಸಭೆಯವರಿಗೆ ಸಲ್ಲಿಸಿರುತ್ತೇನೆ. ಮೂಲ ದಾಖಲೆಗಳನ್ನು ಪುರಸಭೆಯವರು ಪರಿಶೀಲಿಸಿ ಮರಳಿ ಕೊಡುತ್ತಾರೆ ಎಂದರೆ ನನಗೆ ಕೊಟ್ಟಿರುವುದಿಲ್ಲ ಎನ್ನುತ್ತಾರೆ. ನಿ.ಪಿ-1 ರ ಅಸಲು ಪ್ರತಿಯನ್ನು ಸಾಕ್ಷಿಗೆ ತೋರಿಸಲಾಗಿ ಅದನ್ನು ಒಪ್ಪಿದ್ದರಿಂದ ಅದನ್ನು ನಿ.ಡಿ-6 ಎಂದು ಗುರುತಿಸಲಾಯಿತು. ಸಾಕ್ಷಿಗೆ ಕರಾರು ಪತ್ರವನ್ನು ತೋರಿಸಲಾಗಿ ಅದರಲ್ಲಿ ರೂ.5,00,000/- ಗಳಿಗೆ ಖರೀದಿ ಕೊಟ್ಟಿದ್ದು ರೂ.2,00,000/- ಮುಂಗಡವಾಗಿ ಪಡೆದಿದ್ದು ಉಳಿದ ಹಣವನ್ನು ದಾವಾ ಆಸ್ತಿಯನ್ನು ಮರಳಿ ಟಿಪ್ಪುಸುಲ್ತಾನನಿಗೆ ನೊಂದಣಿ ಮಾಡಿಕೊಡುವ ಕಾಲಕ್ಕೆ ಪಡೆದುಕೊಳ್ಳುತ್ತೇನೆ ಎಂದು ಕರಾರು ಬರೆದು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಿ.ಡಿ-6 ರಲ್ಲಿರುವ ಸಹಿಗಳಿಗೂ ಮತ್ತು ಕರಾರು ಪತ್ರದಲ್ಲಿರುವ ಸಹಿಗಳಿಗೂ ಯಾವುದೇ ವ್ಯತ್ಯಾಸ ಇಲ್ಲ ಎಂದರೆ ಸರಿಯಲ್ಲ. ಸದರಿ ಕರಾರು ಪತ್ರವನ್ನು ನಾನೇ ಬರೆದುಕೊಟ್ಟು ಸಹಿ ಮಾಡಿದರೂ ಸಹ ಉದ್ದೇಶ ಪೂರ್ವಕವಾಗಿ ಸಹಿ ನನ್ನದಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ-1 ಖರೀದಿ ಪತ್ರ ಆದ 3 ದಿನಗಳ ನಂತರ ಒಪ್ಪಿಗೆ ಕರಾರು ಪತ್ರವನ್ನು ಪ್ರತಿವಾದಿಗೆ ಬರೆದು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಅದು ಸೃಷ್ಟಿತ ದಾಖಲೆಯಾಗಿರುತ್ತದೆ

ಎನ್ನುತ್ತಾರೆ. ಸದರಿ ಒಪ್ಪಿಗೆ ಪತ್ರದ ಪ್ರಕಾರ ಮುಂದೆ ತಂಟೆ ತಕರಾರು ಬಂದರೆ ನಾನೇ ಬಗೆಹರಿಸಿಕೊಳ್ಳುತ್ತೇನೆ ಎಂದು ಒಪ್ಪಿಗೆ ಕೊಟ್ಟು ಖರೀದಿ ಪತ್ರವನ್ನು ಬರೆಯಿಸಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕ 27-02-2015 ರಂದು ನಾನು ಖರಿದಿ ಹಾಕಿ ಕೊಡುತ್ತೇನೆ ಎಂದು ಪ್ರತಿವಾದಿಗೆ ಬರೆದು ಕೊಟ್ಟ ಬಯಲು ಜಾಗೆಯ ಖರೀದಿ ಪತ್ರ ಇದೆ ಎಂದರೆ ಸರಿಯಲ್ಲ. ನಿ.ಡಿ-1 ರಿಂದ 6 ರ ದಾಖಲೆಗಳು ಟಿಪ್ಪುಸುಲ್ತಾನನಿಗೆ ನೀಡಿರುವ ಕಾರಣ 2012 ರಿಂದ 2021 ವರೆಗೆ ಸದರಿ ಆಸ್ತಿಯನ್ನು ನಾನು ಮಟೆಷನ್ ಮಾಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪ್ರತಿವಾದಿ ತಕರಾರು ಮಾಡಿದ್ದರಿಂದ ವಿಳಂಬವಾಗಿರುತ್ತದೆ ಎನ್ನುತ್ತಾರೆ. ನಿ.ಪಿ-1 ಮತ್ತು ನಿ.ಡಿ-6 ರ ಪ್ರಕಾರ ಕೇವಲ ರೂ.15,000/- ಕೊಟ್ಟಿರುತ್ತೇನೆ ಎಂದು ಬರೆದಿದೆ ಎಂದರೆ ಸರಿ. 2012 ರಲ್ಲಿ ಆಸ್ತಿ ಮೌಲ್ಯ ಅಷ್ಟೆ ಇತ್ತು. ಪ್ರತಿವಾದಿಯಿಂದ ನಾನು ರೂ.5,00,000/- ಗಳನ್ನು ಪಡೆದುಕೊಂಡು ಇಲ್ಲಿಯವರೆಗೂ ದಾವಾ ಆಸ್ತಿಯನ್ನು ಖರಿದಿ ಹಾಕಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಈ ಕಾರಣದಿಂದ ನಾನು ದಾವಾ ಆಸ್ತಿಯ ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಸಂಪೂರ್ಣವಾಗಿ ಪ್ರತಿವಾದಿ ಕಟ್ಟಡ ಕಟ್ಟಿರುತ್ತಾನೆ ಎಂದರೆ ಸರಿಯಲ್ಲ. ಅದು ಇನ್ನೂ ಬಯಲು ಜಾಗೆಯಾಗಿ ಉಳಿದಿರುತ್ತದೆ. ದಾವಾ ಆಸ್ತಿ ಬಯಲು ಜಾಗೆ ಇದೆ ಎಂದು ತೋರಿಸಲು ಪೋಟೋಗಳನ್ನು ಹಾಜರು ಪಡಿಸಿರುವುದಿಲ್ಲ. ನಾನು 2012 ರಿಂದ ಇಲ್ಲಿಯವರೆಗೂ ದಾವಾ ಆಸ್ತಿಯ ಸ್ವಾದೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಟಿಪ್ಪುಸುಲ್ತಾನ ದಾವಾ ಆಸ್ತಿಗೆ ಯಾವುದೇ ತಕರಾರು ಮಾಡಿಲ್ಲ ಅದೇ ರೀತಿ ನಾನು ಸಹ ಪ್ರತಿವಾದಿ ತಕರಾರು ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ಶಶಿಕಾಂತನ ಆಸ್ತಿಯಲ್ಲಿ ಅನಧಿಕೃತ ಕಬ್ಬಿಣದ ಮೆಟ್ಟಲುಗಳನ್ನು ಇಡಲು ಹೋಗಿರುತ್ತಾರೆ ಎಂದು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ ಎಂದರೆ ಸರಿ. ಆಸ್ತಿ ನಂ.4-4-220 ಶಶಿಕಾಂತನ ಆಸ್ತಿ ಎಂದು ಮುಖ್ಯ ವಿಚಾರಣೆಯಲ್ಲಿ ಎಂದು ಬರೆದಿಲ್ಲ ಎಂದರೆ ಸರಿ. ಆಸ್ತಿ ನಂ.4-4-220 ಬಗ್ಗೆ ಮುಖ್ಯ ವಿಚಾರಣೆಯಲ್ಲಿ ಮಾತ್ರ ಬರೆದಿದ್ದು ವಾದ ಪತ್ರದಲ್ಲಿ ಬರೆದಿಲ್ಲ ಎಂದರೆ ಸರಿ. ಆಸ್ತಿ ನಂ.4-4-218/ಎ1 ಆಸ್ತಿ ಅಸ್ತಿತ್ವದಲ್ಲಿ ಇಲ್ಲದೆ ಇದ್ದರೂ ಸಹ ಪ್ರತಿವಾದಿಯ ಆಸ್ತಿಗೆ ಹೊಂದಿಕೊಂಡಿದೆ ಎಂದು ಖರೀದಿ ಪತ್ರದ ಸಲವಾಗಿ ಆಸ್ತಿ ನಂಬರ್ ಸೃಷ್ಟಿ ಮಾಡಿ ಖರೀದಿ ಪತ್ರ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಮೋಸ ಮಾಡುವ ಉದ್ದೇಶದಿಂದ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ನಾನು ಯಾವುದೇ ಮಾಲೀಕ ಮತ್ತು ಸ್ವಾದೀನದಲ್ಲಿ ಇಲ್ಲ ಎಂದರೆ ಸರಿಯಲ್ಲ.

5. 2012 ರಲ್ಲಿ ನಾನು ಮುದಗಲ್ ಪುರಸಭೆಯ ಪೆನಲ್ ವಕೀಲರು ಆಗಿದ್ದೆ ಎಂದರೆ ಸರಿ. ನಾನು ಕೇವಲ ಒಂದು ತಿಂಗಳು ಮಾತ್ರ ಕಾನೂನು ಸಲಹೆಗಾರನಾಗಿದ್ದೆ. ಪ್ರತಿವಾದಿಯು ಖರೀದಿ ಪತ್ರದ ಮುಟೆಷನ್ ಮಾಡಲು ಯಾವ ವರ್ಷ ತಕರಾರು ಸಲ್ಲಿಸಿರುತ್ತಾರೆ ಎಂದರೆ

ನನಗೆ ನೆನಪಿಲ್ಲ. ನಾನು ಪ್ರತಿವಾದಿಯಿಂದ ರೂ.5,00,000/- ತೆಗೆದುಕೊಂಡಿದ್ದರಿಂದ ಆತನ ವಿರುದ್ದ ದಾವೆ ಸಲ್ಲಿಸಲು ಅಧಿಕಾರ ಹೊಂದಿಲ್ಲ ಎಂದರೆ ಸರಿಯಲ್ಲ. ವಾದ ಪತ್ರದೊಂದಿಗೆ ಹಾತ್ ನಕಾಶೆ ಸಲ್ಲಿಸಿರುತ್ತೇನೆ ಎಂದರೆ ಸರಿ. ಹಾತ್ ನಕಾಶೆಯಲ್ಲಿ ದಕ್ಷಿಣ ದಿಕ್ಕಿಗೆ ಟಿಪ್ಪುಸುಲ್ತಾನನ ಆಸ್ತಿ 4-4-218 ಮತ್ತು 4-4-218/ಎ ಎಂದು ಆಸ್ತಿ ಇದೆ ಎಂದರೆ ಸರಿ. ಅನುಬಂದ-ಎ ರಲ್ಲಿ ತೋರಿಸಿದ ಚೆಕ್ಕುಬಂದಿ ದಾವಾ ಆಸ್ತಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ಅನುಬಂಧ-ಎ ಸಲ್ಲಿಸಿದ ಚೆಕ್ಕುಬಂದಿ ಸರಿ ಇರುತ್ತದೆ. ಅನುಬಂಧ-ಎ ರಲ್ಲಿರುವ ಚೆಕ್ಕುಬಂದಿ ಮತ್ತು ನಿ.ಪಿ-1 ಮತ್ತು ನಿ.ಡಿ-6 ರಲ್ಲಿ ಚೆಕ್ಕುಬಂದಿ ಸಂಪೂರ್ಣವಾಗಿ ವ್ಯತ್ಯಾಸ ಇವೆ ಎಂದರೆ ಸರಿಯಲ್ಲ. ನಿ.ಪಿ-1 ರಲ್ಲಿ ಪೂರ್ವಕ್ಕೆ ಕಾಲುದಾರಿ ಎಂದು ಇದ್ದು, ಹಾತ್ ನಕಾಶೆಯಲ್ಲಿ ಪೂರ್ವಕ್ಕೆ ದಾವಾ ಆಸ್ತಿಯ ಉಳಿದ ಆಸ್ತಿ ಎಂದು ಬರೆದಿದೆ ಎಂದರೆ ಸರಿ. ನಿ.ಪಿ-1 ಮತ್ತು ಅನುಬಂಧ-ಎ ರಲ್ಲಿ ಪಶ್ಚಿಮಕ್ಕೆ 20 ಅಡಿ ರಸ್ತೆ ಎಂದು ಬರೆದಿದೆ. ಅದೇ ರೀತಿ ಹಾತ್ ನಕಾಶೆಯಲ್ಲಿ ಪಶ್ಚಿಮಕ್ಕೆ ವಿವಾದಿತ ಆಸ್ತಿ ಎಂದು ಬರೆದಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವು ದಾವಾ ಹಾಕುವಾಗ ಅಲ್ಲಿ ದಾರಿ ಇರಲಿಲ್ಲ ಆದ ಕಾರಣ ವಿವಾದಿತ ಆಸ್ತಿ ಇರುತ್ತದೆ ಎಂದು ಬರೆದಿದೆ. ನಿ.ಪಿ-1 ರಲ್ಲಿ ಉತ್ತರಕ್ಕೆ ದಾರಿ ಹಾಗೂ ಸರ್ಕಾರಿ ಬಯಲು ಜಾಗೆ ಎಂದು ಬರೆದಿದೆ ಎಂದರೆ ಸರಿ. ಆದರೆ ಅನಬಂಧ-ಎ ರಲ್ಲಿ ಉತ್ತರಕ್ಕೆ ಮೋಹಿನ ಪಾಷಾ ಖುರೇಶ ರವರ ಆಸ್ತಿ ಇದೆ ಎಂದು ಬರೆದಿದೆ ಎಂದರೆ ಸರಿ. ಅದೇ ರೀತಿ ನಿ.ಪಿ-1 ರಲ್ಲಿ ದಕ್ಷಿಣಕ್ಕೆ ಸದರಿ ಜಾಗೆಯ ಉಳಿದ ಭಾಗ ಮತ್ತು ಅನುಬಂಧ-ಎ ರಲ್ಲಿ ಪ್ರತಿವಾದಿಯ ಪ್ಲಾಟ್ ಎಂದು ಬರೆದಿದೆ ಎಂದರೆ ಸರಿ. ಈ ಎರಡೂ ಚೆಕ್ಕುಬಂದಿಗಳ ಮಧ್ಯದಲ್ಲಿ ದಾವಾ ಆಸ್ತಿ ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ. ಕೇವಲ ಪ್ರತಿವಾದಿಗೆ ಆರ್ಥಿಕ ಮತ್ತು ಮಾನಸಿಕವಾಗಿ ತೊಂದರೆ ಕೊಡಲು ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಎರಡೂ ದಾಖಲೆಗಳ ಪ್ರಕಾರ ದಾವಾ ಆಸ್ತಿ ಅಸ್ತಿತ್ವದಲ್ಲಿಲ್ಲ ಮತ್ತು ನಾನು ಅದರ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ. ಕೇ. ಸರಿ ಇದೆ.

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.